# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಸ್.ಯು.ನರಸಿಂಹಯ್ಯ, ಅಂದಿನ ಪ್ರಭಾರ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ( ಪ್ರಸ್ತುತ ನಿವೃತ್ತ) ಇವರಿಗೆ ದಂಡನೆ ವಿಧಿಸುವ ಬಗ್ಗೆ. – ಆದೇಶ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 261 ಇಎನ್‌ಕ್ಯೂ 96 ದಿನಾಂಕ 18-03-2002
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 261 ಇಎನ್‌ಕ್ಯೂ 2002 ದಿನಾಂಕ 11-12-2002.
3. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ 217/2003ರಲ್ಲಿ ನೀಡಿದ ಅಂತಿಮ ಆದೇಶ ದಿನಾಂಕ 02-04-2013.
4. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 316 ಜಿಪಅ 2011 ದಿನಾಂಕ 31-01-2014
5. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ PSC 56 CNS 15 ಪಿಎಸ್‌ಸಿ ದಿನಾಂಕ 26-06-2015.

*****

**ಪ್ರಸ್ತಾವನೆ:**

ಚಿತ್ರದುರ್ಗ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ದಿನಾಂಕ 1-4-1996 ರಿಂದ 30-06-1996 ರ ವರೆಗಿನ ಅವಧಿಯಲ್ಲಿ ಖರೀದಿಸಲಾದ ಉಗ್ರಾಣ ಸಾಮಗ್ರಿಗಳ ಗುಣ ಮಟ್ಟ ಕಳಪೆಯಾಗಿದೆ ಎಂದು, ಉಪ ವಿಭಾಗಗಳಿಂದ ಸಾಮಗ್ರಿಗಳ ಬೇಡಿಕೆ ಬಗ್ಗೆ ಇಂಡೆಂಟ್ ಪಡೆಯದೆ ಖರೀದಿಸಿ ಗಂಭೀರ ಸ್ವರೂಪದ ಲೋಪ / ಅಕ್ರಮ ಎಸಗಿರುವ ಬಗ್ಗೆ ಚಿತ್ರದುರ್ಗ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಅನುಸರಿಸಿ, ಸರ್ಕಾರವು ಈ ಕೆಳಕಂಡ ಅಧಿಕಾರಿ / ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲಾಗಿದೆ:-

1. ಶ್ರೀ ಎಸ್.ಯು.ನರಸಿಂಹಯ್ಯ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್
2. ಶ್ರೀ ಎಸ್.ಪಿ.ಜಾಗನೂರು, ನಿವೃತ್ತ ಉಗ್ರಾಣಾಧೀಕ್ಷಕ
3. ಶ್ರೀ ಇ.ಕೆ.ಕೊಟ್ರಬಸವರಾಜು, ಸಹಾಯಕ ಇಂಜಿನಿಯರ್
4. ಶ್ರೀ ಸೋಮಶೇಖರ್, ಸ್ಟೋರ್ಸ್ ಆಡಿಟರ್
5. ಶ್ರೀ ಯರ್ರಿಸ್ವಾಮಿ, ಲೆಕ್ಕಾಧೀಕ್ಷಕರು

ಮೇಲೆ ತಿಳಿಸಿರುವ ಆಪಾದಿತರುಗಳ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳಾದ ಬೆಂಗಳೂರು ವಿಭಾಗದ ವಿಭಾಗಾಧಿಕಾರಿಗಳು ಇಲಾಖಾ ವಿಚಾರಣೆಯನ್ನು ಕೈಗೊಂಡು ಸರ್ಕಾರಕ್ಕೆ ವರದಿಯನ್ನು ದಿನಾಂಕ 15-12-1999ರಂದು ಸಲ್ಲಿಸಿದ್ದರು. ಸದರಿ

---2

ವಿಚಾರಣಾ ವರದಿಯನ್ನು ಆಧರಿಸಿ ಸರ್ಕಾರವು ನಿಗದಿತ ವಿಧಿವಿಧಾನಗಳನ್ನು ಅನುಸರಿಸಿ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮೇಲೆ ತಿಳಿಸಿರುವ ಎಲ್ಲಾ ಆಪಾದಿತರುಗಳಿಗೆ ದಂಡನೆಯನ್ನು ವಿಧಿಸಲಾಗಿತ್ತು. ಸದರಿ ಆದೇಶದಲ್ಲಿ ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರ ನಿವೃತ್ತಿ ವೇತನದಿಂದ ಪ್ರತಿ ತಿಂಗಳು ರೂ. 100/- ರಂತೆ ಒಂದು ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಲಾಗಿತ್ತು.

ಸದರಿ ದಂಡನಾ ಆದೇಶದ ವಿರುದ್ಧ ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಗಳು 1957ರ ಅಡಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಸರ್ಕಾರವು ಸದರಿ ಮೇಲ್ಮನವಿಯ ಬಗ್ಗೆ ಪರಿಶೀಲಿಸಿ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 11-12-2002ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತದೆ.

ಮೇಲಿನ ಆದೇಶಗಳ ವಿರುದ್ಧ ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ. 217/2003ನ್ನು ಸಲ್ಲಿಸಿದ್ದು, ಸದರಿ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 2-4-2013ರಂದು ನೀಡಿರುವ ಅಂತಿಮ ಆದೇಶದಲ್ಲಿ ಅರ್ಜಿಯನ್ನು ಪುರಸ್ಕರಿಸಿ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 261 ಇಎನ್‌ಕ್ಯೂ 96 ದಿನಾಂಕ 18-03-2002 ಮತ್ತು ಆದೇಶ ಸಂಖ್ಯೆ ಗ್ರಾಅಪ 261 ಇಎನ್‌ಕ್ಯೂ 2002 ದಿನಾಂಕ 11-12-2002 ಗಳನ್ನು ರದ್ದುಪಡಿಸಿ, ಪ್ರತಿವಾದಿಯಾದ ಸರ್ಕಾರಕ್ಕೆ ಅರ್ಜಿದಾರರು (ಆಪಾದಿತ ಅಧಿಕಾರಿ) ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಲು ಅವಕಾಶವನ್ನು ನೀಡಿರುತ್ತದೆ.

ಸರ್ಕಾರವು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿದ ಆದೇಶವನ್ನು ಗಮನದಲ್ಲಿ ಇಟ್ಟುಕೊಂಡು ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ 31-01-2014ರ ಆದೇಶದಲ್ಲಿ ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಸೀಮಿತವಾಗಿ ಹೊರಡಿಸಿದ್ದ ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ದಿನಾಂಕ 18-03-2002 ಮತ್ತು ದಿನಾಂಕ 11-12-2002ರ ಆದೇಶಗಳನ್ನು ರದ್ದುಪಡಿಸಲಾಗಿದೆ.

ಮುಂದುವರೆದು, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ 217/2003ರಲ್ಲಿ ದಿನಾಂಕ 2-4-2013 ರಂದು ನೀಡಿರುವ ಆದೇಶದಂತೆ ಸರ್ಕಾರವು ಶ್ರೀ ಎಸ್.ಯು.ನರಸಿಂಹಯ್ಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರು ದಿನಾಂಕ 18-08-2001 ಮತ್ತು 20-08-2001ರಂದು ಸಲ್ಲಿಸಿದ್ದ ಲಿಖಿತ ಹೇಳಿಕೆಗಳಲ್ಲಿನ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಸದರಿ ಲಿಖಿತ ಹೇಳಿಕೆಗಳಲ್ಲಿ ತಾವು ಟೆಂಡರ್ ಕರೆಯುವ ಪದ್ಧತಿಯನ್ನು ಅಳವಡಿಸಿಕೊಂಡಿದ್ದಲ್ಲಿ 3 ತಿಂಗಳಿಗೂ ಹೆಚ್ಚಿನ ಕಾಲಾವಕಾಶ ಬೇಕಾಗಿದ್ದು, ಕುಡಿಯುವ ನೀರಿನ ಕ್ಷಾಮ ಇದ್ದುದರಿಂದ ಅತಿ ಜರೂರಾಗಿ ಕ್ರಮ ಕೈಗೊಳ್ಳಬೇಕಾಗಿದ್ದ ಕಾರಣ ಕಡಿಮೆ ದರ ನಮೂದಿಸಿದ ಸಂಸ್ಥೆಗಳಿಂದ ಎಸ್.ಪಿ.ಡಿ. ನಿಗದಿಪಡಿಸಿದ

---3

ದರಕ್ಕಿಂತಲೂ ಶೇಕಡಾ 20ರಷ್ಟು ಕಡಿಮೆ ದರದಲ್ಲಿ ಸಾಮಗ್ರಿಗಳನ್ನು ಖರೀದಿಸಿದ್ದು, ಇದರಿಂದ ಸರ್ಕಾರಕ್ಕೆ ರೂ. 9.00 ಲಕ್ಷಕ್ಕೂ ಹೆಚ್ಚಿನ ಮೊತ್ತ ಉಳಿತಾಯವಾಗಿದೆ ಎಂದು, ವಿವಿಧ ಎಸ್.ಪಿ.ಡಿ. ದರ ಅನುಮೋದಿತ ಸಂಸ್ಥೆಗಳಿಗೆ ಸುಮಾರು ರೂ. 60.00 ಲಕ್ಷಗಳ ಬಾಕಿ ನೀಡಬೇಕಾಗಿದ್ದು, ಹಿಂದಿನ ಬಾಕಿ ತೀರಿಸದೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಸಂಸ್ಥೆಗಳು ನಿರಾಕರಿಸಿರುವ ಹಿನ್ನೆಲೆಯಲ್ಲಿ, ಎಸ್.ಪಿ.ಡಿ.ಯೇತರ ಸಂಸ್ಥೆಗಳಿಂದ ಸಾಮಗ್ರಿ ಖರೀದಿಸಲಾಗಿದೆ ಎಂದು, ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಖರೀದಿಸಲಾಗಿದೆ ಎಂದು, ಜಿಲ್ಲಾ ಪಂಚಾಯತಿಯು ಸರಬರಾಜು ಮಾಡಿದ ಪ್ರಪತ್ರಗಳನ್ನು ಬಳಸಿರುವುದರಿಂದ ಉದ್ದೇಶ ಪೂರ್ವಕವಾದ ದುರ್ನಡತೆ ಎಸಗಿಲ್ಲವೆಂದು, ತಮ್ಮ ವಿರುದ್ಧ ಸಾಬೀತಾಗಿರುವ ಎಲ್ಲಾ 4 ಆರೋಪಗಳು ಒಂದೇ ಆರೋಪದ ಪುನರಾವರ್ತನೆ ಆಗಿವೆಯೆಂದು, ಚಿತ್ರದುರ್ಗ ಜಿಲ್ಲಾಧಿಕಾರಿಯವರು ಬೃಹತ್ ಪ್ರಮಾಣದಲ್ಲಿ ಅನುದಾನವನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಿದ್ದು, ಅತಿ ಜಾಣತನದಿಂದ ಕುಡಿಯುವ ನೀರಿನ ಕ್ಷಾಮವನ್ನು ನಿರ್ವಹಿಸಿರುವುದಾಗಿಯೂ, ತುರ್ತಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಸಾಮಗ್ರಿಗಳನ್ನು ಖರೀದಿಸಿರುವುದಾಗಿಯೂ, ತಮ್ಮ ಈ ಕ್ರಮದಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲವೆಂದು ತಿಳಿಸಿ ತಮ್ಮನ್ನು ದೋಷಮುಕ್ತರನ್ನಾಗಿಸಬೇಕೆಂದು ಕೋರಿದ್ದಾರೆ.

ಸರ್ಕಾರವು ಆಪಾದಿತ ಅಧಿಕಾರಿಯು ಲಿಖಿತ ಹೇಳಿಕೆಯಲ್ಲಿ ತಿಳಿಸಿದ ಮೇಲಿನ ಅಂಶಗಳನ್ನು ಪರಿಗಣಿಸಿದೆ. ಮೇಲಿನ ಅಂಶಗಳಿಗೆ ಪೂರಕವಾಗಿ ಆಪಾದಿತ ಅಧಿಕಾರಿಯು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಶ್ರೀ ಎಸ್.ಯು.ನರಸಿಂಹಯ್ಯ ಇವರು ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್‌ರಾಗಿ ಚಿತ್ರದುರ್ಗ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ್ದ ಅವಧಿಯಲ್ಲಿ ಸಾಮಗ್ರಿಗಳನ್ನು ಖರೀದಿಸುವ ಪೂರ್ವದಲ್ಲಿ ನಿಯಮಾನುಸಾರ ಸಾಮಗ್ರಿಗಳ ಬೇಡಿಕೆಯಿರುವ ಬಗ್ಗೆ ಇಂಡೆಂಟ್‌ನ್ನು ಪಡೆದು, ನಂತರ ಇಂಡೆಂಟ್‌ನಲ್ಲಿರುವ ಸಾಮಗ್ರಿಗಳನ್ನು ಅವಶ್ಯಕತೆಗನುಗುಣವಾಗಿ ಖರೀದಿಸಲು ಕ್ರಮವಹಿಸದೇ ಹೆಚ್ಚುವರಿ ಅಥವಾ ಅನಾವಶ್ಯಕ ಸಾಮಗ್ರಿಗಳನ್ನು ಖರೀದಿಸುವ ಮೂಲಕ ತೀವ್ರತರವಾದ ದುರ್ನಡತೆ ಮತ್ತು ಘೋರ ಅಪರಾಧವನ್ನು ಎಸಗಿರುತ್ತಾರೆ.

ಎಸ್‌ಪಿಡಿ ದರ ಅನುಮೋದನೆ ಇಲ್ಲದ ಸ್ಥಳೀಯ ಸಂಸ್ಥೆಗಳಿಂದ ರೂ. 46,75,478/- ಗಳಷ್ಟು ಬೃಹತ್ ಪ್ರಮಾಣದ ಸಾಮಗ್ರಿಗಳನ್ನು ಖರೀದಿಸಿದ್ದು, ಒಂದು ವೇಳೆ ಸದರಿಯವರು ಟೆಂಡರ್ ಕರೆದು, ಬೃಹತ್ ಮೊತ್ತದ ಸಾಮಗ್ರಿಗಳನ್ನು ಖರೀದಿ ಮಾಡಿದ್ದಲ್ಲಿ ಸರ್ಕಾರಕ್ಕೆ ಆರ್ಥಿಕ ಉಳಿತಾಯ ಮಾಡುವ ಸಾಧ್ಯತೆಯು ಬಹಳಷ್ಟಿತ್ತು. ಅಲ್ಲದೆ, ಕುಡಿಯುವ ನೀರಿನ ಕ್ಷಾಮ ಇದ್ದುದರಿಂದ ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದ ಅನುದಾನವನ್ನು ತುರ್ತಾಗಿ ಬಳಸಿಕೊಳ್ಳುವ ಉದ್ದೇಶದಿಂದ ಸದರಿ ಪ್ರಕರಣದಲ್ಲಿ ಸಾಮಗ್ರಿಗಳನ್ನು ಖರೀದಿ ಮಾಡುವುದು ಅತ್ಯಂತ ಅವಶ್ಯಕವಾಗಿತ್ತೆಂದು ತಿಳಿಸಿದ್ದರೂ ಇದಕ್ಕೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಸದರಿಯವರು ಬೃಹತ್ ಪ್ರಮಾಣದ ಸಾಮಗ್ರಿಗಳ ಖರೀದಿಯಲ್ಲಿ ನಿಗಧಿತ ವಿಧಿವಿಧಾನಗಳನ್ನು ಅನುಸರಿಸದೇ ಎಸ್.ಪಿ.ಡಿ. ಅನುಮೋದಿತವಲ್ಲದ ಸಂಸ್ಥೆಗಳಿಂದ ಸಾಮಗ್ರಿಗಳನ್ನು ಖರೀದಿಸಲು ಆಸಕ್ತಿ ತೋರಿರುವುದು ಅನುಮಾನಕ್ಕೆ ಆಸ್ಪದವಾಗಿದ್ದು ವೈಯಕ್ತಿಕ ಹಿತಾಸಕ್ತಿಯಿಂದ ಈ ರೀತಿ ಖರೀದಿಸಿರುತ್ತಾರೆಂಬುದು ಸ್ಪಷ್ಟವಾಗುತ್ತದೆ. ಸದರಿ ಖರೀದಿಯಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಇಲ್ಲದಿದ್ದರೂ ಸಹ ಆಪಾದಿತ ಅಧಿಕಾರಿಯು ನಿಗದಿತ

---4

ವಿಧಿವಿಧಾನಗಳನ್ನು ಪಾಲಿಸದೆ ಬೃಹತ್ ಪ್ರಮಾಣದ ಸಾಮಗ್ರಿಗಳನ್ನು ಖರೀದಿಸುವ ಮೂಲಕ ತೀವ್ರತರವಾದ ಕರ್ತವ್ಯ ಲೋಪ ಮತ್ತು ನಿರ್ಲಕ್ಷ್ಯದ ಅಪರಾದ ಎಸಗಿರುವುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ ಆಪಾದಿತ ಅಧಿಕಾರಿಯ ವಿರುದ್ಧದ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ. ಗ್ರಾಅಪ 316 ಜಿಪಅ 2011 ಬೆಂಗಳೂರು, ದಿನಾಂಕ. 13-07-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಚಿತ್ರದುರ್ಗ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯ ಪ್ರಭಾರದಲ್ಲಿದ್ದ ಅವಧಿಯಲ್ಲಿ ಎಸಗಿರುವ ದುರ್ನಡತೆ ಮತ್ತು ನಿರ್ಲಕ್ಷದ ಅಪರಾಧದ ಸಾಬೀತಾದ ಆರೋಪಕ್ಕೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (ಎ)ರ ಅನುಸಾರ ಸದರಿಯವರ ನಿವೃತ್ತಿ ವೇತನದ ಶೇಕಡಾ 10% ರಷ್ಟನ್ನು 3 ವರ್ಷಗಳ ಅವಧಿಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಿದೆ.

ಕರ್ನಾಟಕ ಲೋಕ ಸೇವಾ ಆಯೋಗವು ಪತ್ರ ಸಂಖ್ಯೆ **PSC 56 CNS 15** ಪಿಎಸ್‌ಸಿ ದಿನಾಂಕ 26-06-2015ರಲ್ಲಿ ದಂಡನೆಯನ್ನು ವಿಧಿಸಲು ಸಹಮತಿ ನೀಡಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

( ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ / ಜಲಸಂಪನ್ಮೂಲ ಇಲಾಖೆ.
3. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ.
7. ಶ್ರೀ ಎಸ್.ವಿ.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.114, 2ನೇ ಮೈನ್, 7ನೇ ಕ್ರಾಸ್, ಕೆಂಗೇರಿ ಉಪ ನಗರ, ಬೆಂಗಳೂರು – ನೋಂದಾಯಿತ ಅಂಚೆ ಮೂಲಕ.

---5

ಪ್ರತಿ ಮಾಹಿತಿಗಾಗಿ:

1. ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
2. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ & ಸಿ)
3. ಗ್ರಾ.ಅ.ಪಂ.ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
4. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
5. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.